ಸಂತೇಮಾರನಹಳ್ಳಿ 6-7-2001 ರಿಂದ ಕಾರ್ಯಾರಂಭ ಆಗಿದೆ. ಎಂದರೆ ಕಟ್ಟಡವು ಪೂರ್ಣಗೊಂಡಿರುವುದಿಲ್ಲ.

ಆ) ಕುದೇರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವೈದ್ಯರು ಹಾಗೂ ಸಿಬ್ಬಂದಿಯವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸಂತೇಮಾರನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಾಮಾನ್ಯ ವೈದ್ಯಾಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮಹಿಳಾ ವೈದ್ಯರು ಹಾಗೂ ಆಗತ್ಯ ಸಿಬ್ಬಂದಿ ಹುದ್ದೆ ಮಂಜೂರಾಗಿರುವುದಿಲ್ಲ. ಮಂಜೂರು ಮಾಡಲು ಪ್ರಸ್ತಾವನೆ ಬಂದಿರುವುದಿಲ್ಲ.

ಕಡೂರು ತಾಲ್ಲೂಕಿನಲ್ಲಿ ಆರ್ಯುವೇದ ಆಸ್ಪತ್ರೆಗಳು

1747 (2066) ಶ್ರೀ ಕೃಷ್ಣಮೂರ್ತಿ ಕೆ.ಎಂ (ಕಡೂರು) : ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕಿನಲ್ಲಿ ಎಷ್ಟು ಆಯುರ್ವೇದ ಆಸ್ಪತ್ರೆಗಳು ಇವೆ;

ಆ) ಇರುವ ಆಯುರ್ವೇದ ಆಸ್ಪತ್ರೆಗಳಲ್ಲಿ ವೈದ್ಯರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ;

ಇ) ಹಿಂದಿನ ವರ್ಷದಲ್ಲಿ ಎಷ್ಟು ಮೊತ್ತದ ಔಷಧವನ್ನು ಸರ್ಕಾರ ಆಸ್ಪತ್ರೆಗಳಿಗೆ ನೀಡಿದೆ;

ಈ) ಸಾರ್ವಜನಿಕರಿಗೆ ಔಷಧಿಗಳು ದೊರೆಯಲು ಆಸ್ಪತ್ರೆಗಳ ಮುಖಾಂತರ ಸೌಲಭ್ಯ ನೀಡಲಾಗಿದೆಯೇ;

ಉ) ಖಾಲಿ ಇರುವ ಆಸ್ಪತ್ರೆಗಳಿಗೆ ವೈದ್ಯರ ನೇಮಕ ಪ್ರಕ್ರಿಯೆ ನಡೆದಿದೆಯೇ?

ಶ್ರೀಮತಿ ನಫೀಸ್ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ರಾಜ್ಯ ಸಚಿವರು)

ಅ) 2 (ಎರಡು) ಆಸ್ಪತ್ರೆಗಳು

1. ಕಡೂರು 2. ಎರದಗೆರೆ

ಆ) ಹೌದು

ಇ) ರೂ. 66,000-00 ಮೊತ್ತದ ಔಷಧಿಯನ್ನು ನೀಡಲಾಗಿದೆ.

ಈ) ನೀಡಲಾಗಿದೆ.

ಉ) ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು

1748 (2067) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2002-2003ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿಗೆ ಕುಡಿಯುವ ನೀರಿನ ಬಾಬ್ತಿಗಾಗಿ ಮೀಸಲಿರಿಸಿದ ಆಯವ್ಯಯ ಎಷ್ಟು; ಮುಂದುವರಿದ ಕಾಮಗಾರಿಗೆ ಬೇಕಾಗುವ ಮೊತ್ತ ಎಷ್ಟು; ಹೊಸ ಕಾಮಗಾರಿಗೆ ಕಾಯ್ದಿರಿಸಿರುವ ಮೊತ್ತ ಎಷ್ಟು;

ಆ) ಸುಸ್ಥಿತಿಗೆ ತರುವಷ್ಟು ಹೊಸ ಕಾಮಗಾರಿಗೆ ಹಣ ನೀಡಲಾಗಿದೆಯೇ; ನೀಡದಿದ್ದಲ್ಲಿ ಕಾರಣವೇನು;

ಇ) ಬದಲಿ ವ್ಯವಸ್ಥೆಗೆ ಸರ್ಕಾರದಲ್ಲಿರುವ ಚಿಂತನೆ ಏನು; ರಾಜ್ಯವಲಯದ ವಿಶೇಷ ಅನುದಾನದಲ್ಲಿ ಕುಡಿಯುವ ನೀರಿನ ಹೊಸ ಕಾಮಗಾರಿಗೆ ಹೆಚ್ಚಿನ ಅನುದಾನಕ್ಕೆ ಮಂಜೂರಾತಿ ನೀಡಲಾಗಿವುದೇ;

ಶ್ರೀ ಕೆ.ಬಿ. ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ) 2002-03ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಅನುಷ್ಠಾನಕ್ಕಾಗಿ (ನಿರ್ವಹಣೆಯೂ ಸೇರಿದಂತೆ) ಚಿಕ್ಕಮಗಳೂರು ಜಿಲ್ಲಾ ಪಂಚಾಯತಿಗೆ ರೂ. 548.35 ಲಕ್ಷಗಳನ್ನು ಒದಗಿಸಲಾಗಿದ್ದು, ನಿರ್ವಹಣಾ ಮೊತ್ತವನ್ನು ಬಿಟ್ಟು ಬಾಕಿ ಪೂರ್ತಿ ಹಣವನ್ನು ಮುಂದುವರೆದ ಯೋಜನೆಗಳ ಅನುಷ್ಠಾನಕ್ಕಾಗಿ ಬಳಸಲು ಉದ್ದೇಶಿಸಿದೆ.

ಆ) ಉದ್ಭವಿಸುವುದಿಲ್ಲ.

ಇ) ತೀವ್ರ ಕುಡಿಯುವ ನೀರಿನ ಸಮಸ್ಯೆ ಇರುವಂತಹ ಗ್ರಾಮಗಳಲ್ಲಿ ಯೋಜನೆಗಳ ಅನುಷ್ಠಾನಕ್ಕಾಗಿ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿಗೆ ಹೆಚ್ಚುವರಿ ಅನುದಾನ ಒದಗಿಸಲು ಪರಿಶೀಲಿಸಲಾಗುವುದು.

ಚಿಕ್ಕಮಗಳೂರು ಜಿಲ್ಲಾ ರಸ್ತೆಗಳ ಅಭಿವೃದ್ಧಿ

1749 (2068) ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 2002-03ನೇ ಸಾಲಿನ ಚಿಕ್ಕಮಗಳೂರು ಜಿಲ್ಲಾ ಪಂಚಾಯತಿ ಯೋಜನೆ ಹಾಗೂ ಯೋಜನೇತರದಲ್ಲಿ ಜಿಲ್ಲಾ ಹಾಗೂ ಗ್ರಾಮೀಣ ರಸ್ತೆಗೆ ಅಭಿವೃದ್ಧಿಪಡಿಸಲು ಹಣ ನಿಗದಿಪಡಿಸಲಾಗಿದೆಯೇ;

2) ನಿಗದಿಪಡಿಸಿದ್ದಲ್ಲಿ, ಅದರ ಮೊತ್ತವೆಷ್ಟು

3) ಕಡೂರು ತಾಲ್ಲೂಕಿಗೆ ನಿಗದಿಪಡಿಸಿದ ಹಣ ಎಷ್ಟು; ತಾಲ್ಲೂಕಿನ ವ್ಯಾಪ್ತಿಯ ಎಲ್ಲ ರಸ್ತೆಗಳಿಗೆ ಪೂರ್ಣಗೊಳಿಸಲು ಹಣ ಸಾಕಾಗುತ್ತದೆಯೇ;

4) ಸಾಕಾಗದಿದ್ದಲ್ಲಿ ಬದಲಿ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1) ನಿಗದಿಪಡಿಸಲಾಗಿದೆ.

2) ಯೋಜನೆಯಡಿಯಲ್ಲಿ ರೂ. 171.20 ಲಕ್ಷಗಳನ್ನು ಮತ್ತು ಯೋಜನೇತರದಲ್ಲಿ ರೂ. 298.40 ಲಕ್ಷಗಳನ್ನು ನಿಗದಿಪಡಿಸಲಾಗಿರುತ್ತದೆ.

3) ಕಡೂರು ತಾಲ್ಲೂಕಿಗೆ ಜಿಲ್ಲಾ ಇತರೆ ರಸ್ತೆಗಳು ಮತ್ತು ಗ್ರಾಮೀಣ ರಸ್ತೆಗೆ ಯೋಜನೆಯಲ್ಲಿ ರೂ. 35.05 ಲಕ್ಷಗಳನ್ನು ಮತ್ತು ಯೋಜನೇತರದಲ್ಲಿ ರೂ. 21.64 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಕಡೂರು ತಾಲ್ಲೂಕಿನ ವ್ಯಾಪ್ತಿಯ ಎಲ್ಲಾ ರಸ್ತೆಗಳಿಗೆ ಪೂರ್ಣಗೊಳಿಸಲು ಹಣ ಸಾಕಾಗುವುದಿಲ್ಲ.

4) ತಾಲ್ಲೂಕಿನ ಅನುದಾನಕ್ಕೆ ಅನುಗುಣವಾಗಿ, ಆದ್ಯತೆ ಮೇಲೆ ಕಾಮಗಾರಿಯನ್ನು ತೆಗೆದುಕೊಳ್ಳಲಾಗುವುದು.